# ತುಮಕೂರು ವಿಶ್ವವಿದ್ಯಾನಿಲಯ

## ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ

ಡಾ.ಜಗದಾಂಬ ಚಿವುಕುಲ ಕಟ್ಟಡ, ವಿಶ್ವವಿದ್ಯಾನಿಲಯ ಆವರಣ, ಬಿ.ಹೆಚ್. ರಸ್ತೆ ತುಮಕೂರು 572 103

ಸಂಖ್ಯೆ:ತು.ವಿ.ಡಾ.ಬಿ.ಆರ್.ಅಂ.ಅ.ಕೇಂ: 2025-26: 11 ದಿನಾಂಕ: 08.04.2026

**ದರಪಟ್ಟಿ ಆಹ್ವಾನ (ವಿ.ವಿ.ವೆಬ್ ಸೈಟ್‌ನಲ್ಲಿ)**

ವಿಷಯ: ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನಕ್ಕೆ ಅಗತ್ಯವಿರುವ ಊಟ, ಉಪಹಾರ ಮತ್ತು ಕಾಫಿ/ಟೀ ಸರಬರಾಜಿಗಾಗಿ ದರಪಟ್ಟಿ ಆಹ್ವಾನಿಸುತ್ತಿರುವ ಕುರಿತು.

ಉಲ್ಲೇಖ: ವಿ.ವಿ.ಆದೇಶ ಸಂಖ್ಯೆ: ತುವಿ:ಸಾ.ವಿ:2025-26/8917 ದಿನಾಂಕ: 18.03.2026.

* * * *

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಡಾ.ಬಿ.ಆರ್ ಅಂಬೇಡ್ಕರ್ ಅಧ್ಯಯನ ಕೇಂದ್ರವು ಡಾ.ಬಿ.ಆರ್.ಅಂಬೇಡ್ಕರ್ ತರಬೇತಿ, ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ, ಬೆಂಗಳೂರು ಇವರ ಸಹಯೋಗದೊಂದಿಗೆ **ದಿನಾಂಕ:23 ಮತ್ತು 24ನೇ ಏಪ್ರಿಲ್, 2026** ರಂದು ***"REVISITING DR.B.R.AMBEDKAR'S PHILOSOPHY:INCLUSION, DEMOCRAC, AND SOCIAL JUSTICE IN 21ST CENTURY INDIA"*** ಎಂಬ ವಿಷಯದ ಕುರಿತು ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲಾಗಿದ್ದು, ಸದರಿ ಸಮ್ಮೇಳನಕ್ಕೆ ಅಗತ್ಯವಿರುವ **ಊಟ, ಉಪಹಾರ ಮತ್ತು ಕಾಫಿ/ಟೀ** ಸರಬರಾಜು ಮಾಡಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ನೊಂದಾಯಿತ ಸಂಸ್ಥೆಯಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ. | ಸಮಯ | ವಿವರ | ಸರಬರಾಜಿನ ಅಂದಾಜು ಪ್ರಮಾಣ | ನಮೂದಿಸುವ ಮೊತ್ತ (ರೂಗಳಲ್ಲಿ) ಪ್ರತಿ ಪ್ಲೇಟಿಗೆ |
|---|---|---|---|---|
| **ದಿನಾಂಕ: 23.04.2026** | | | | |
| 1 | ಬೆಳಿಗ್ಗೆ 8 ಗಂಟೆ | ಉಪಹಾರ:<br>ತಟ್ಟೆ ಇಡ್ಲಿ, ಚಟ್ನಿ, ಸಾಂಬಾರ್, ಪೊಂಗಲ್, ಉದ್ದಿನವಡೆ, ಕಾಫಿ / ಟೀ | 100 | |
| 2 | ಬೆಳಗ್ಗೆ 11 ಗಂಟೆ | ಕಾಫಿ / ಟೀ, ಬಿಸ್ಕೆಟ್/ಸ್ನ್ಯಾಕ್ಸ್ | 200 | |
| 3 | ಅಪರಾಹ್ನ 1.00 ಗಂಟೆ | ಊಟ:<br>ಉಪ್ಪು, ಉಪ್ಪಿನಕಾಯಿ, ಕೋಸಂಬರಿ, ಪಲ್ಯ, ಬೇಬಿಕಾರ್ನ್ ಮಂಚೂರಿಯನ್, ಶಾವಿಗೆ ಪಾಯಸ, ಮ್ಯಾಂಗೋ ಚಮ್ ಚಮ್, ರುಮಾಲೆ ರೊಟ್ಟಿ, ವೆಜ್ ಕಡಾಯಿ, ಡ್ರಮ್‌ಸ್ಟಿಕ್ ಬಿರಿಯಾನಿ, ರೈಸ್, ಪೊಪ್ಪು ಸಾಂಬಾರ್, ಮೊಸರು, ಮಜ್ಜಿಗೆ, ಐಸ್‌ಕ್ರೀಮ್ ಮತ್ತು ಬಾಳೆಹಣ್ಣು. | 200 | |
| 4 | ಅಪರಾಹ್ನ 3.30 ಗಂಟೆ | ಕಾಫಿ / ಟೀ, ಬಿಸ್ಕೆಟ್/ಸ್ನ್ಯಾಕ್ಸ್ | 200 | |
| 5 | ರಾತ್ರಿ 8 ಗಂಟೆ | ಊಟ:<br>ಉಪ್ಪು, ಉಪ್ಪಿನಕಾಯಿ, ಹಪ್ಪಳ, ಆಲೂಬೋಂಡ, ತರಕಾರಿ ಸಲಾಡ್, ಪನ್ನಿರ್ ಬಟರ್ ಮಸಾಲ, ಮೆಂತ್ಯ ಚಪಾತಿ, ರೈಸ್, ತರಕಾರಿ ಸಾಂಬಾರ್, ಮೊಸರು, ಐಸ್ ಕ್ರೀಮ್ ಜೊತೆ ಕ್ಯಾರೆಟ್ ಹಲ್ವ. | 160 | |

| | | | | |
|---|---|---|---|---|
| **ದಿನಾಂಕ: 24.04.2026** | | | | |
| 6 | ಬೆಳಿಗ್ಗೆ 8 ಗಂಟೆ | ಉಪಹಾರ:<br>ಮಸಾಲ ದೋಸೆ, ಚಟ್ನಿ, ಪಲ್ಯ, ಮಸಾಲ ವಡೆ, ಪೈನಾಪಲ್, ಕೇಸರಿಬಾತ್ ಕಾಫಿ / ಟೀ | 100 | |
| 7 | ಬೆಳಿಗ್ಗೆ 11 ಗಂಟೆ | ಕಾಫಿ / ಟೀ, ಬಿಸ್ಕೇಟ್/ಸ್ನ್ಯಾಕ್ಸ್ | 200 | |
| 8 | ಅಪರಾಹ್ನ 1.00 ಗಂಟೆ | ಊಟ:<br>ಉಪ್ಪು, ಉಪ್ಪಿನಕಾಯಿ, ಪಾಯಸ, ಹೆಸರುಕಾಳು ಪಲ್ಯ, ಬೋಂಡ, ಹೋಳಿಗೆ, ತುಪ್ಪ, ಹಾಲು, ಪೂರಿ ಚನ್ನ ಮಸಾಲ, ಕೋಕೊನಟ್ ರೈಸ್, ಹೋಳಿಗೆ ಸಾಂಬಾರ್, ಮೊಸರು, ಫ್ರೂಟ್ ಬೌಲ್ ಜೊತೆ ಐಸ್‌ಕ್ರೀಮ್ & ಪಾಯಸ. | 200 | |
| 9 | ಅಪರಾಹ್ನ 3.30 ಗಂಟೆ | ಕಾಫಿ / ಟೀ, ಬಿಸ್ಕೇಟ್/ಸ್ನ್ಯಾಕ್ಸ್ | 200 | |

**ಷರತ್ತು ಮತ್ತು ನಿಬಂಧನೆಗಳು:**

1. ಲಕೋಟೆಯ ಮೇಲೆ **ಊಟ, ಉಪಹಾರ ಮತ್ತು ಕಾಫಿ/ಟೀ** ದರಪಟ್ಟಿ ಎಂದು ಸ್ಪಷ್ಟವಾಗಿ ನಮೂದಿಸಬೇಕು.
2. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 15.04.2026 ಸಮಯ 12.00** ಗಂಟೆಯೊಳಗೆ ಸಲ್ಲಿಸತಕ್ಕದ್ದು.
3. ದರಪಟ್ಟಿಯನ್ನು **ದಿನಾಂಕ: 15.04.2026 ರಂದು ಸಮಯ 12.30** ಕ್ಕೆ ತೆರೆಯಲಾಗುವುದು.
4. ದರಪಟ್ಟಿಗಳನ್ನು **ಪ್ರೊ. ಕೇಶವ, ನಿರ್ದೇಶಕರು, ಡಾ.ಬಿ.ಆರ್ ಅಂಬೇಡ್ಕರ್ ಅಧ್ಯಯನ ಕೇಂದ್ರ** ,ಡಾ.ಜಗದಾಂಬ ಚಿವುಕುಲ ಕಟ್ಟಡ, ವಿಶ್ವವಿದ್ಯಾನಿಲಯ ಆವರಣ, ಬಿ.ಹೆಚ್.ರಸ್ತೆ, ತುಮಕೂರು – 572 103 ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಯವು ಜವಬ್ದಾರಿಯಾಗುವುದಿಲ್ಲ.
5. ದರಪಟ್ಟಿಯ ಅವಧಿಯು ದರಪಟ್ಟಿಯನ್ನು ತೆರೆದ ದಿನಾಂಕದಿಂದ ಒಂದು ವಾರದವರೆಗೆ ಚಾಲ್ತಿಯಲ್ಲಿರಬೇಕು.
6. ಸರಬರಾಜು ಸಂಸ್ಥೆಯು ದರಪಟ್ಟಿಯೊಂದಿಗೆ ತಮ್ಮ **GST & Pan Card** ದಾಖಲೆಗಳನ್ನು ಲಗತ್ತಿಸಬೇಕು.
7. ಮುಂಗಡವಾಗಿ ಹಣ ಪಾವತಿಸಲಾಗುವುದಿಲ್ಲ. ಸರಬರಾಜು ಮಾಡಿದ ತರುವಾಯ ಹಣ ಪಾವತಿಸಲಾಗುವುದು.
8. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
9. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ **ಪ್ರೊ. ಕೇಶವ, ನಿರ್ದೇಶಕರು, ಡಾ.ಬಿ.ಆರ್ ಅಂಬೇಡ್ಕರ್ ಅಧ್ಯಯನ ಕೇಂದ್ರ,** ಇವರನ್ನು ಸಂಪರ್ಕಿಸಬಹುದು.

**ವಂದನೆಗಳೊಂದಿಗೆ,**

**ತಮ್ಮ ವಿಶ್ವಾಸಿ,**

Keshava

**(ಪ್ರೊ. ಕೇಶವ)**

ನಿರ್ದೇಶಕರು
ಡಾ|| ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

**ಪ್ರತಿಗಳು:**

1. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು– (ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ)
2. ಕಛೇರಿ ಪ್ರತಿ.